# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ. **782/2024** ಪಿ.ಡಬ್ಲೂ .1

**ದಿನಾಂಕಃ 12-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

ನಾನು ಈ ಪ್ರಕರಣದಲ್ಲಿ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ.

ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ

ನಿಪಿ.1 ದಿನಾಂಕಃ 29-09-2021 ರಂದು 1 ನೇ ಪ್ರತಿವಾದಿಯ ಗಂಡ ಮತ್ತು 2 ಮತ್ತು 3 ನೇ ಪ್ರತಿವಾದಿಗಳ ತಂದೆಯಾದ ಮೃತ ಚಂದ್ರಶೇಖರ್ ಹಾಗೂ 4 ನೇ ಪ್ರತಿವಾದಿ ಬರೆದುಕೊಟ್ಟ ನೊಂದಣಿ ಕರಾರು ಪತ್ರ. ಸದರಿ ದಾಖಲೆಗೆ ನಾನು ಮತ್ತು ಸದರಿ ಚಂದ್ರಶೇಖರ್ ಹಾಗೂ 4 ನೇ ಪ್ರತಿವಾದಿ ಸಹಿ ಮಾಡಿದ್ದು, ಸದರಿ ದಾಖಲೆಗೆ ಸಾಕ್ಷಿಯಾಗಿ ಮುರುಗೇಶ್ ಮತ್ತು ವೆಂಕಟರೆಡ್ಡಿ ರವರು ಸಹಿ ಮಾಡಿದ್ದು, ಲಕ್ಷ್ಮಣ ಎಂಬುವವರು ಬರೆದಿರುತ್ತಾರೆ. ಸಾಕ್ಷಿಯು ತನ್ನ ಮತ್ತು ಸಾಕ್ಷಿಗಳ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. 1(ಎ) ಯಿಂದ (ಎಫ್) ಎಂದು ಗುರುತಿಸಲಾಯಿತು.

ನಿಪಿ. 2 ನೋಟಿಸಿನ ಕಛೇರಿ ಪ್ರತಿ.

ನಿಪಿ. 3 ರಿಂದ 7 ಅಂಚೆ ರಶೀದಿಗಳು.

ನಿಪಿ. 8 ಅಂಚೆ ಲಕೋಟೆ.

ನಿಪಿ. 9-11 ಅಂಚೆ ಸ್ವೀಕೃತಿಗಳು.

ನಿಪಿ. 12-14 ಪಹಣಿಗಳು.

ಆದುದರಿಂದ ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕಾಗಿ ಕೋರುತ್ತೇನೆ.

ಪ್ರತಿವಾದಿಗಳು ಲಿಖಿತ ಹೇಳಿಕೆ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.